ಕಿಲೋಮೀಟರ್ ರಸ್ತೆಯ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇದೇ ರೀತಿ ಶೀರ್ಷಿಕೆ 3054ರ ಕೆಳಗೆ ಶೀರ್ಷಿಕೆ 5054 ಕೆಳಗೆ, ಶೀರ್ಷಿಕೆ 2225ರ ಕೆಳಗೆ ಬೇರೆ ಬೇರೆ ಸಂದರ್ಭಗಳಲ್ಲಿ ಸುಮಾರು ಆರೆಂಟು ಕಿಲೋಮೀಟರ್‌ಗಿಂತ ಹೆಚ್ಚು ಡಾಂಬರೀಕರಣವನ್ನು ಆಯಾ ಶೀರ್ಷಿಕೆಗಳ ಕೆಳಗೆ ಕೆಲಸ ಮಾಡಿದ್ದೇವೆ. ಮಾರ್ಚ್ 1998ರೊಳಗೆ ಅನೇಕ ಕಡೆ, ಉದಾಹರಣೆಗೆ 5054ರ ಕೆಳಗೆ ಈಗಾಗಲೇ ಉಳಿದ 1.20 ಕಿಲೋಮೀಟರ್‌ನಷ್ಟು ರಸ್ತೆ ಕೆಲಸವನ್ನು ಮಾಡಿಕೊಡುತ್ತೇವೆ. ಹಾಗೆಯೇ ಗ್ರಾಮದ ಪರಿಮಿತಿಯಲ್ಲಿ ಈಗಾಗಲೇ ಒಂದೂವರೆ ಕಿಲೋಮೀಟರ್ ಆಗಿದೆ. 1998ರ ಮಾರ್ಚ್‌ಯೊಳಗೆ ಉಳಿದ ಎಲ್ಲಾ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆ. ಹರಿಜನವಾಡ ರಸ್ತೆಯಲ್ಲಿ ಈಗಾಗಲೇ ಅರ್ಧ ಕಿಲೋಮೀಟರ್ ರಸ್ತೆ ಮಾಡಿದ್ದೇವೆ. ಉಳಿದಿರತಕ್ಕದ್ದನ್ನು ಮಾರ್ಚ್ 1998ರೊಳಗೆ ಮುಗಿಸುತ್ತೇವೆ. ಹಾಗೆಯೇ ಯೋಜನೇತರ ಅಡಿಯಲ್ಲಿ ಆರೂವರೆ ಕಿಲೋಮೀಟರ್ ಡಾಂಬರೀಕರಣ ಈಗಾಗಲೇ ಯೋಚಿಸಲಾಗಿದ್ದು ಅದರಲ್ಲಿ ಎರಡೂವರೆ ಕಿಲೋಮೀಟರ್ ರಸ್ತೆ ಮುಗಿದಿದೆ. ಇನ್ನು ನಾಲ್ಕು ಕಿಲೋಮೀಟರ್ ರಸ್ತೆಯನ್ನು ಮಾರ್ಚ್ 1998ರೊಳಗೆ ಮುಗಿಸಿಕೊಡುತ್ತೇವೆ.

ಶ್ರೀ ಯು.ಬಿ.ಬಣಕಾರ್: ಈ ವರ್ಷ ದಯವಿಟ್ಟು ಪ್ರತಿಯೊಂದು ತಾಲ್ಲೂಕಿಗೂ ಕನಿಷ್ಠ 15 ಕಿಲೋಮೀಟರ್ ಡಾಂಬರ್ ರಸ್ತೆಯನ್ನಾದರೂ ತೆಗೆದುಕೊಳ್ಳುವುದಕ್ಕೆ ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಈ ವರ್ಷ ಬೇಡ. ಮುಂದಿನ ವರ್ಷ ತೆಗೆದುಕೊಳ್ಳಿ. ಏಕೆಂದರೆ ಎಲೆಕ್ಷನ್‌ಗೆ ಹತ್ತಿರ ಇರುತ್ತದೆ. ಈಗಲೇ ತೆಗೆದುಕೊಂಡರೆ ಜನ ಮರೆತುಬಿಡುತ್ತಾರೆ. ಮುಂದಿನ ವರ್ಷಕ್ಕೆ ಅಡ್ಜಸ್ಟ್ ಮಾಡಿಕೊಡಿ ಅವರಿಗೆ.

ಮಂಗಳೂರು ನಗರದಲ್ಲಿ ಮಲೇರಿಯಾ ನಿಯಂತ್ರಣ ಘಟಕ

17 (214)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಂಗಳೂರು ನಗರದಲ್ಲಿ ಮಲೇರಿಯಾ ಪೀಡಿತರಾಗಿ ಜನರು ನರಳುತ್ತಿದ್ದು, ಹಲವು ಸಾವುನೋವುಗಳಾಗಿದ್ದರೂ ಪೂರ್ಣ ಪ್ರಮಾಣದ ಮಲೇರಿಯ ನಿಯಂತ್ರಣ ಘಟಕವನ್ನು ಮಂಗಳೂರಿಗೆ ಕೊಡದಿರಲು ಕಾರಣವೇನು?

ಆ. ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳುವುದು?

ಇ. ಮಂಗಳೂರಿನ ಪೂರ್ಣ ಪ್ರಮಾಣದ ಮಲೇರಿಯ ನಿಯಂತ್ರಣ ಘಟಕಕ್ಕೆ

ಮಂಜೂರಾತಿಯನ್ನು ಯಾವಾಗ ಮಾಡಲಾಗುವುದು.

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ. ಮಲೇರಿಯ ನಿಯಂತ್ರಣಕ್ಕೆ ಮಂಗಳೂರು ನಗರದಲ್ಲಿ ಫೈಲೇರಿಯ ನಿಯಂತ್ರಣ ಘಟಕವು ಕಾರ್ಯ ನಿರ್ವಹಿಸುತ್ತಿದೆ. ಭಾರತ ಸರ್ಕಾರದ ರಾಷ್ಟ್ರೀಯ ಮಲೇರಿಯ ನಿಯಂತ್ರಣ ಕಾರ್ಯಕ್ರಮದ ಮಾರ್ಗಸೂಚಿಯಂತೆ ಮಲೇರಿಯ ಮತ್ತು ಫೈಲೇರಿಯ ಸೊಳ್ಳೆಗಳ ನಿಯಂತ್ರಣ ಕ್ರಮಗಳು ಏಕರೂಪ ಕಾರ್ಯಕ್ರಮದವುಗಳಾಗಿರುವುದರಿಂದ ಪ್ರತ್ಯೇಕವಾದ ಮಲೇರಿಯ ನಿಯಂತ್ರಣ ಘಟಕದ ಅವಶ್ಯಕತೆಯಿರುವುದಿಲ್ಲ.

ಆ. ಮಂಗಳೂರು ನಗರದಲ್ಲಿ ಮಲೇರಿಯ ನಿಯಂತ್ರಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಮಂಗಳೂರು ನಗರ ಪ್ರದೇಶದಲ್ಲಿ ಎಲ್ಲಾ ಸರ್ಕಾರಿ ಆಸ್ಪತ್ರೆ ಮತ್ತು ನಗರ ಪಾಲಿಕೆಯ ಚಿಕಿತ್ಸಾಲಯಗಳಲ್ಲಿ ಮಲೇರಿಯ ತಪಾಸಣೆ, ರಕ್ತಲೇಪನ ಸಂಗ್ರಹಣೆ ಮತ್ತು ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಮಲೇರಿಯ ನಿರೋಧಕ ಔಷಧಿ ಗುಳಿಗೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆ.

2. ನಗರ ಪ್ರದೇಶದಲ್ಲಿ ಸಕ್ರಿಯ ರಕ್ತಲೇಪನ ಸಂಗ್ರಹಣೆ ಪರೀಕ್ಷೆ ಮತ್ತು ಚಿಕಿತ್ಸಾ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

3. ನಗರ ಪಾಲಿಕೆ ಸಹಕಾರದೊಂದಿಗೆ ಸೊಳ್ಳೆ ನಿಯಂತ್ರಣ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ.

4. ಸಾಕಷ್ಟು ಪ್ರಮಾಣದಲ್ಲಿ ಕೀಟನಾಶಕಗಳನ್ನು ಭಾರತ ಸರ್ಕಾರದ ವತಿಯಿಂದ ಸರಬರಾಜು ಮಾಡಲಾಗಿದೆ.

5. ಈ ರೋಗದ ನಿಯಂತ್ರಣಕ್ಕೆ ಜನಜಾಗೃತಿ ಮೂಡಿಸಲು ಆರೋಗ್ಯ ಶಿಕ್ಷಣವನ್ನು ನೀಡಲಾಗಿದೆ.

ಇ. ಉದ್ಭವಿಸುವುದಿಲ್ಲ.

ಶ್ರೀ ಎನ್.ಯೋಗೀಶ್ ಭಟ್: ಸನ್ಮಾನ್ಯ ಅಧ್ಯಕ್ಷರೆ, ತುಂಬಾ ನೋವಿನಿಂದ ನಾನು ಹೇಳುತ್ತಿದ್ದೇನೆ. ಕಳೆದ ಒಂದು ವರ್ಷದಲ್ಲಿ 22,028 ಜನ ಮಲೇರಿಯಾದಿಂದ ರೋಗಪೀಡಿತರಾಗಿದ್ದಾರೆ. ಸುಮಾರು 22 ಜನ ತೀರಿಹೋಗಿದ್ದಾರೆ. ಇಂಥ ಒಂದು ದುಃಸ್ಥಿತಿಯಲ್ಲೂ ಕಳೆದ ಎರಡು ವರ್ಷಗಳಿಂದ ನಾನು ಬೇಡಿಕೆ ಇಡುತ್ತಿದ್ದರೂ ನಮಗೆ

ಒಂದು ಪೂರ್ಣ ಪ್ರಮಾಣದ ಮಲೇರಿಯಾ ನಿಯಂತ್ರಣ ಘಟಕವನ್ನು ಕೊಟ್ಟಿಲ್ಲ. ಆದರೆ ಆಶ್ಚರ್ಯವಾಗುತ್ತದೆ ನನಗೆ. ಕೇಂದ್ರಸರ್ಕಾರದ ಯೋಜನೆ ಇದು. 12 ಕೋಟಿ ರೂಪಾಯಿ ಯಾವುದು ಸ್ಯಾಂಕ್ಷನ್ ಆಗಿತ್ತು ಮಲೇರಿಯಾ ರೋಗ ನಿರ್ಮೂಲನೆಗೋಸ್ಕರ ಆ 12 ಕೋಟಿ ರೂಪಾಯಿಯಲ್ಲಿ 7 ಕೋಟಿ ರೂಪಾಯಿಗಳನ್ನು ಬೆಂಗಳೂರು ಮೈಸೂರು ರಸ್ತೆಯಲ್ಲಿರುವ ವೃಷಭಾವತಿ ನದಿಗೆ ಡಿ.ಡಿ.ಟಿ ಮತ್ತು ಕೆಮಿಕಲ್ಸ್ ಹಾಕುವುದಕ್ಕೆ ಖರ್ಚು ಮಾಡಿದ್ದಾರೆ. ಹೆಬ್ಬಾಳ ಕೆರೆಯನ್ನು ಕ್ಲೀನ್ ಮಾಡುವುದಕ್ಕೆ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದಕ್ಕೆ ಆಡಿಟ್ ಅಬ್ಜೆಕ್ಷನ್ ಆಗಿದೆ. 12 ಕೋಟಿ ರೂಪಾಯಿಗಳನ್ನು ಈ ತರಹ ದುರುಪಯೋಗ ಮಾಡುವುದಕ್ಕೆ ಆಗುತ್ತದೆ ಇವರಿಗೆ. ಆದರೆ ಅಲ್ಲಿ ಜನ ಸಫರ್ ಆಗುತ್ತಿದ್ದಾರೆ, ಜನ ಸಾಯುತ್ತಿದ್ದಾರೆ, ಒಂದು ಮಲೇರಿಯಾ ನಿಯಂತ್ರಣ ಘಟಕ ಕೊಡುವುದಕ್ಕೆ ಇವರಿಗೆ ಸಾಧ್ಯ ಇಲ್ಲವೇ ಎಂದು ಕೇಳುತ್ತಿದ್ದೇನೆ ಅಧ್ಯಕ್ಷರೆ, ತಾವು ನನ್ನ ರಕ್ಷಣೆಗೆ ಬರಬೇಕು. ಆರೋಗ್ಯ ಸಚಿವರ ಮೇಲಾಗಲೀ ಇಲಾಖೆಯ ಮೇಲಾಗಲೀ ಆರೋಗ್ಯಾಧಿಕಾರಿಗಳ ಮೇಲಾಗಲೀ ನಾನು ಏನೇನೂ ಭರವಸೆಯನ್ನು ಇಟ್ಟುಕೊಂಡಿಲ್ಲ. ತಾವೇ ನನ್ನ ರಕ್ಷಣೆಗೆ ಬರಬೇಕು. ನಮಗೆ ಒಂದು ಘಟಕವನ್ನು ತಾವು ಕೊಡಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಡಾ॥ ಹೆಚ್.ಸಿ.ಮಹಾದೇವಪ್ಪ: ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಕಳೆದಬಾರಿ ಇದೇ ಪ್ರಶ್ನೆಯನ್ನು ಕೇಳಿದ್ದರು. ಮಲೇರಿಯಾ ನಿಯಂತ್ರಣದ ಬಗ್ಗೆ ಸೊಳ್ಳೆಗಳ ಉತ್ಪಾದನೆ ಮತ್ತು ಅದರ ಸಂತತಿಯನ್ನು ನಿಯಂತ್ರಣ ಮಾಡತಕ್ಕದ್ದು ಈ ಕಾರ್ಯಕ್ರಮದ ಮೂಲ ಉದ್ದೇಶ. ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಈಗಾಗಲೇ ಒಂದು ಪೈಲೇರಿಯಾ ಘಟಕ ಮಂಗಳೂರು ನಗರದಲ್ಲಿ ಕೆಲಸ ಮಾಡುತ್ತಿದ್ದು ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಕಾರ್ಯಕ್ರಮ ಹಾಗೂ ಪೈಲೇರಿಯಾ ನಿಯಂತ್ರಣ ಕಾರ್ಯಕ್ರಮ ಎರಡೂ ಒಂದೇ ಆಗಿರುವುದರಿಂದ ಸೊಳ್ಳೆಗಳ ಸಂತತಿಯನ್ನು ನಾಶ ಮಾಡತಕ್ಕ ಉದ್ದೇಶದಿಂದ ಆಗಿರುವುದರಿಂದ ತಾಂತ್ರಿಕ ಕಾರಣಗಳಿಂದ ಕೇಂದ್ರ ಸರ್ಕಾರ ಮತ್ತೊಂದು ಯೋಜನೆಯನ್ನು ಮಂಜೂರು ಮಾಡುವುದಕ್ಕೆ ಸಾಧ್ಯ ಇಲ್ಲದಿದ್ದರೂ ಸಹ ನಮ್ಮ ಇಲಾಖೆಯಿಂದಲೇ ಸಿಬ್ಬಂದಿಗಳನ್ನು ಅಲ್ಲಿ ನೇಮಕ ಮಾಡಿ ಮಲೇರಿಯಾ ಪ್ರಕರಣವನ್ನು ಕಡಿಮೆ ಮಾಡುವುದಕ್ಕೆ ಎಲ್ಲಾ ಪ್ರಯತ್ನ ಮಾಡಿ ಮತ್ತು ಚಿಕಿತ್ಸಾಲಯವನ್ನು ವೆನ್‌ಲಾಕ್ ಆಸ್ಪತ್ರೆ, ನಗರ ಕಾರ್ಪೊರೇಷನ್ ಮ್ಯಾಷ್ಟಿ ಮತ್ತು ಆರೋಗ್ಯ ಇಲಾಖೆ ವತಿಯಿಂದ ಮಾಡಿ ಸುಮಾರು 9,880 ಮಲೇರಿಯಾ ಪ್ರಕರಣಗಳನ್ನು ಗುರುತಿಸಿ ಅದರಲ್ಲಿ 1,550 ಬೇರೆ ಬೇರೆ ರೀತಿಯ ಮಲೇರಿಯಾಗಳನ್ನು ಗುರುತಿಸಿದ್ದೇವೆ. ಮತ್ತು ಟ್ರೀಟ್‌ಮೆಂಟ್‌ನ್ನೂ ಕೂಡ ನಾವು ಕೊಟ್ಟಿದ್ದೇವೆ. ಇವತ್ತು ಕೇವಲ ಮೂರು ಜನ ಸತ್ತಿದ್ದಾರೆ ಎಂದು ನಮಗೆ ವರದಿ ಬಂದಿದೆ. ಕಳೆದ ಬಾರಿಗಿಂತ ಈ ಬಾರಿಗೆ ಹೋಲಿಕೆ ಮಾಡಿದಾಗ ಮಲೇರಿಯಾ ಪ್ರಕರಣಗಳು ಕಡಿಮೆಯಾಗಿದೆ.

ಅಧ್ಯಕ್ಷರು: ಆ ಸ್ಟಾಟಿಸ್ಟಿಕ್ಸ್ ಬೇರೆ. ಅವರು ಅಲ್ಲಿಯ ಸದಸ್ಯರು. ಅವರು ಏನು

ಹೇಳುತ್ತಿದ್ದಾರೆ ಎಂದರೆ ನೀವು ಎಲ್ಲಾ ಕ್ರಮ ಕೈಗೊಂಡರೂ ಸಹ ಸಾವುಗಳು ಜಾಸ್ತಿಯಾಗುತ್ತಿವೆ, ನಮಗೆ ಸಾಕಷ್ಟು ತೊಂದರೆಯುಗುತ್ತಿದೆ ಎಂದು ಹೇಳಿದ್ದಾರೆ. ಆದ್ದರಿಂದ ಪೂರ್ಣ ಪ್ರಮಾಣದ ಮಲೇರಿಯಾ ಘಟಕವನ್ನು ಅಲ್ಲಿ ಸ್ಥಾಪನೆ ಮಾಡುವುದಕ್ಕೆ ಆಲೋಚನೆ ಮಾಡುತ್ತೀರಾ? ಅಷ್ಟು ಉತ್ತರ ಹೇಳಿಬಿಡಿ.

ಡಾ॥ ಹೆಚ್.ಸಿ.ಮಹದೇವಪ್ಪ: ಸಾರ್, ತಮ್ಮ ಗಮನಕ್ಕೆ ಈಗಾಗಲೇ ಹೇಳಿದ್ದೇನೆ. ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮ ಮತ್ತು ಪೈಲೇರಿಯಾ ಕಾರ್ಯಕ್ರಮಗಳು ಒಂದೇ ವಿಧವಾದ ಒಂದೇ ಉದ್ದೇಶದಿಂದ ಕೂಡಿರತಕ್ಕ ಕೆಲಸ ಮಾಡುತ್ತಾ ಇರುವುದರಿಂದ ಪೂರ್ಣ ಪ್ರಮಾಣದ ಮಲೇರಿಯಾ ನಿಯಂತ್ರಣ ಘಟಕಗಳನ್ನು ಅಲ್ಲಿ ಕೊಡತಕ್ಕ ಅಗತ್ಯ ಇಲ್ಲ. ಏಕೆಂದರೆ ಅದರ ಉದ್ದೇಶವೂ ಒಂದೇ, ಇದರ ಉದ್ದೇಶವೂ ಒಂದೇ.

ಅಧ್ಯಕ್ಷರು: ಡಾಕ್ಟರೇ, ಇದೆಲ್ಲದರ ಉದ್ದೇಶ ಏನು? ಜನ ಸಾಯಬಾರದು ಎಂದು. ಅವರ ಕಂಪ್ಲೇಂಟ್ ಏನು? ಜನ ಸಾಯುತ್ತಿದ್ದಾರೆ ಎಂದು. ಇದರಿಂದ ಈಗ ನೀವು ಮಾಡಿರುವ ವ್ಯವಸ್ಥೆ ಸರಿಯಿಲ್ಲ ಎಂದು ಆಯಿತಲ್ಲಾ. ಜನ ಸಾಯುತ್ತಿದ್ದಾರೆ ಎಂದರೆ. ಸುಳ್ಳುಸುಳ್ಳಾಗಿ ಸಾಯದಿದ್ದರೂ ಸಾಯುತ್ತಿದ್ದಾರೆ ಎಂದು ಒಬ್ಬ ಶಾಸಕರು ಈ ಸಭೆಯಲ್ಲಿ ಬಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಮಲೇರಿಯಾ ಕಾರಣದಿಂದ ಜನ ಸಾಯುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ತಾವು ಈಗ ಮಾಡಿರತಕ್ಕ ಅರೇಂಜ್‌ಮೆಂಟ್ ಇನ್‌ಅಡಿಕ್ವೇಟ್ ಆದರೆ ಅದನ್ನು ಅಪ್‌ಗ್ರೇಡ್ ಮಾಡಲಿಕ್ಕೆ ಯೋಚನೆ ಮಾಡಬೇಕು. ಸ್ಕೀಂ ಇದೆ, ಸ್ಕೀಂ ಇದೆ ಅಂದರೆ, ಸ್ಕೀಮಿದ್ದರೂ ಜನ ಸಾಯುತ್ತಿದ್ದಾರೆ ಏನು ಪ್ರಯೋಜನ?

ಡಾ॥ ಹೆಚ್.ಸಿ.ಮಹದೇವಪ್ಪ: ಉದ್ದೇಶ ಒಂದೇ ಅಲ್ವಾ ಸಾರ್.

ಅಧ್ಯಕ್ಷರು: ಉದ್ದೇಶ ಒಂದೇ. ಆದರೆ ಜನ ಸಾಯುತ್ತಿದ್ದಾರಲ್ಲ.

ಶ್ರೀ ವಾಟಾಳ್ ನಾಗರಾಜ್: ಈಗ ಆ ಪ್ರದೇಶದಲ್ಲಿ ಜನ ಸಾಯುತ್ತಿದ್ದಾರೆ. ಅದನ್ನು ತಡೆಯುವುದಕ್ಕೆ ತಾವು ಒಂದು ವಿಶೇಷವಾದ ಘಟಕವನ್ನು ರಚನೆ ಮಾಡುತ್ತೀರಾ ಹೇಳಿ. ಈಗ ಬೇರೆ ವಿಚಾರ ಬೇಕಾಗಿಲ್ಲ.

ಡಾ॥ ಹೆಚ್.ಸಿ.ಮಹದೇವಪ್ಪ: 10 ಪರ್ಸೆಂಟ್ ಬ್ಲಡ್ ಸ್ಮಿಯರ್ ತೆಗೆಯಬೇಕಾಗಿತ್ತು ನಾವು. ಆದರೆ 18 ಪರ್ಸೆಂಟ್ ಸ್ಮಿಯರ್ ತೆಗೆದು ರಾಜ್ಯದಲ್ಲಿ ಪರೀಕ್ಷೆ ಮಾಡುತ್ತಿದ್ದೇವೆ. ಇಡೀ ದೇಶದಲ್ಲಿ ನಮ್ಮದೇ ಸರ್ಕಾರ ಪ್ರಥಮವಾಗಿದೆ.

ಅಧ್ಯಕ್ಷರು: ಇಲ್ಲಿ ಕೇಳಿ. ನಾನು ಪ್ರಿಸೈಡಿಂಗ್ ಆಗಿ ಇಲ್ಲಿ ಕುಳಿತಾಗ ಸಾಧ್ಯವಾದಷ್ಟು ಮಟ್ಟಿಗೆ ತಮ್ಮ ಮತ್ತು ಸದಸ್ಯರ ಮಧ್ಯೆ ಕೋ-ಆರ್ಡಿನೇಟ್ ಮಾಡಬೇಕಾಗುತ್ತದೆ. ನಾವು

ಕೊಡತಕ್ಕ ಮಾಹಿತಿ ನಿಮ್ಮ ಅಧಿಕಾರಿಗಳು ಕೊಡತಕ್ಕ ವಿಚಾರದಮೇಲೆ ಇರುತ್ತದೆ. ಅವರು ಹೇಳತಕ್ಕದ್ದು ಸ್ಥಳೀಯ ವಿದ್ಯಮಾನದ ಆಧಾರದ ಮೇಲಿರುತ್ತದೆ. ಅದನ್ನು ಕುರಿತು ಅವರು ಹೇಳುತ್ತಾರೆ. ಸಾವುಗಳೇ ಆಗದೇ ಹೋದರೆ ಉತ್ಪ್ರೇಕ್ಷೆ ಮಾಡಿ ಸಾವಾಗಿದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಒಬ್ಬ ಸದಸ್ಯರು ಹೇಳುವಾಗ ತಾವು ಅದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಪ್ರಾಯಶಃ ನಮ್ಮ ಸಚಿವರು ಯೋಚನೆ ಮಾಡಿ ಹೇಳತಕ್ಕದ್ದು ಯಾವುದೇ ನಿಯಂತ್ರಣದ ವ್ಯವಸ್ಥೆ ಪರಿಪೂರ್ಣವಾಗಿರಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪೂರ್ಣ ಪ್ರಮಾಣದ ಘಟಕ ನೇಮಕ ಮಾಡಿದರೂ ಕೂಡ ಸ್ವಲ್ಪಮಟ್ಟಿನ ಸಾವಿನ ಸಂಖ್ಯೆ ಇರುತ್ತದೆ. ಆದ್ದರಿಂದ ಈಗಿರತಕ್ಕ ವ್ಯವಸ್ಥೆಯೇ ಸಂಪೂರ್ಣವಾದ ಜವಾಬ್ದಾರಿಯನ್ನು ತೆಗೆದುಕೊಳ್ಳಬಹುದು. ಮತ್ತೊಂದು ಘಟಕದ ಅವಶ್ಯಕತೆ ಇಲ್ಲ. ಆದರೂ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ಹೆಚ್ಚಿನ ಪ್ರಮಾಣದ ಸಾವು ಅದೇ ಕಾರಣಕ್ಕೆ ಆಗಿಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ.

ಅಧ್ಯಕ್ಷರು: ಅವರು ಹೇಳಿದಹಾಗೆ ಪೂರ್ಣ ಪ್ರಮಾಣದ ಘಟಕದ ಅವಶ್ಯಕತೆ ಇಲ್ಲದೇ ಇರಬಹುದು. ಆದರೆ ಯಾವುದರ ಅವಶ್ಯಕತೆಯಿಂದ ಸಾವುಗಳನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಿ. ಉದ್ದೇಶ ಜನರನ್ನು ಉಳಿಸಬೇಕು ಎಂಬುದು.

ಶ್ರೀ ಹೆಚ್.ಸಿ.ಮಹದೇವಪ್ಪ: ಆಗಬಹುದು ಸಾರ್.

ಶ್ರೀ ಎನ್.ಯೋಗೀಶ್ ಭಟ್: ಯಾವುದೇ ಲ್ಯಾಬೋರೇಟರೀಸ್ ಇಲ್ಲ. ಅಷ್ಟು ಮಾತ್ರವಲ್ಲದೆ, ಆರೋಗ್ಯ ಇಲಾಖೆಯಲ್ಲಿ ಕೂಡ ಪೌರ ಕಾರ್ಮಿಕರಿಲ್ಲ. ಶುಚಿತ್ವ ಮಾಡುವ ಸ್ಥಿತಿಯಲ್ಲಿಲ್ಲ. ಪೈಲೇರಿಯಾ ಘಟಕದ ಕಾರ್ಯವ್ಯಾಪ್ತಿ ಬೇರೆ, ಮಲೇರಿಯಾ ಘಟಕದ ಕಾರ್ಯವ್ಯಾಪ್ತಿ ಬೇರೆ. ಕಳೆದ ಹಲವು ವರ್ಷಗಳ ಹಿಂದೆ ಇದು ಕಾರ್ಯ ರೂಪದಲ್ಲಿದ್ದು, ಈಗ ನಿಯಂತ್ರಣದಲ್ಲಿದೆ. ಈಗ ಅದು ಕಾರ್ಯ ನಿರ್ವಹಿಸುತ್ತಿಲ್ಲ. ಅದಕ್ಕೋಸ್ಕರ ಕೇಂದ್ರಸರ್ಕಾರದಿಂದ ಬರುತ್ತಿರುವ 18 ಕೋಟಿ ರೂಪಾಯಿಗಳ ಅನುದಾನದಲ್ಲಿ ಕನಿಷ್ಠಮಟ್ಟದಲ್ಲಾದರೂ ನಮಗಾದರೂ ಕೊಡಿ. ಅದರಿಂದ ಜನರಿಗೆ ಉಪಯೋಗವಾಗಲೆಂದು ವಿನಂತಿಸುತ್ತೇನೆ.

ಡಾ|| ಹೆಚ್.ಸಿ.ಮಹದೇವಪ್ಪ: ಕೇಂದ್ರ ಸರ್ಕಾರದಿಂದ ಬರುತ್ತಿರುವ 18 ಕೋಟಿ ರೂಪಾಯಿ ಅನುದಾನ ಅರ್ಬನ್ ಮಲೇರಿಯಾಕ್ಕೆ ಬರುವುದಿಲ್ಲ. ಇದು ಗ್ರಾಮೀಣ ಪ್ರದೇಶದ ಮಲೇರಿಯಾ ನಿಯಂತ್ರಣಕ್ಕೆ ಬರುವಂತಹ ಹಣ. ರಾಜ್ಯ ಮತ್ತು ಕೇಂದ್ರದ 50:50ರಷ್ಟು ಹಣದಲ್ಲಿ ಹೆಚ್ಚಾಗಿ ಮೆಟೀರಿಯಲ್ ಹಾಕುತ್ತೇವೆ. ಕೆರೆಗಳಿಗೆ ಔಷಧಿ ಹೊಡೆಯದೆ, ಡ್ರೈ ಏರಿಯಾಗೆ ಹೊಡೆಯುವುದಕ್ಕಾಗುವುದಿಲ್ಲ. ಈಗಾಗಲೇ ಅಲ್ಲಿ

ಇದನ್ನು ಮಾಡುತ್ತಿದ್ದೇವೆ. ಕಾರ್ಪೊರೇಷನ್ ನಮ್ಮ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ.

ಅಧ್ಯಕ್ಷರು: ನಿಮ್ಮನ್ನು ಮಧ್ಯಾಹ್ನದ ನಂತರ ಕರೆಯುತ್ತೇನೆ. ಮಂತ್ರಿಗಳು ಬರುತ್ತಾರೆ, 10 ನಿಮಿಷ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ಮಂತ್ರಿಗಳು ಬರುವುದು ಬೇಕಿಲ್ಲ. ನಮಗೆ ಮಲೇರಿಯಾದಿಂದ ಸಾಯತಕ್ಕವರನ್ನು ಉಳಿಸುವುದು ಹೇಗೆ? ಎಂಬುದು ಬೇಕು. ಅವರು ಬಂದರೂ ಜನ ಸತ್ತೇ ಸಾಯುತ್ತಾರೆ. ಜನ ಸಾಯುವುದು ನಿಲ್ಲುವುದಿಲ್ಲ. ಆ ಕುರಿತು ಏನು ಮಾಡಬೇಕು ಅದನ್ನು ತಾವು ಮಾಡಿಸಬೇಕು.

ಶ್ರೀ ಡಿ.ನಾರಾಯಣರಾವ್: ಸ್ವಾತಂತ್ರ್ಯ ಬಂದಾಗಿನಿಂದಲೂ ರಾಜ್ಯ ಮತ್ತು ಕೇಂದ್ರಸರ್ಕಾರಗಳಿಂದ ಈ ಮಲೇರಿಯಾವನ್ನು ಹೋಗಲಾಡಿಸಲಾಗಿಲ್ಲ. ಇದನ್ನು ಹೋಗಲಾಡಿಸಲು ಕಾಲಾವಧಿ ಯಾವುದಾದರೂ ನಿರ್ಧಾರ ಮಾಡಿದ್ದೀರಾ?

ಅಧ್ಯಕ್ಷರು: ಮಲೇರಿಯಾ ಬರುವುದು ಸೊಳ್ಳೆಗಳಿಂದ. ಸೊಳ್ಳೆಗಳು ಎಲ್ಲಿ ಇರುತ್ತವೆಂದು ನಿಮಗೆ ಗೊತ್ತಿಲ್ಲವೇ?

ಶ್ರೀ ಡಿ.ನಾರಾಯಣದಾಸ್: ಇಷ್ಟು ವರ್ಷಗಳಲ್ಲಿ ನೀವು ಇದನ್ನು ಹೋಗಲಾಡಿಸುವುದಕ್ಕೆ ಆಗುತ್ತದೆಂದು ಹೇಳುವುದಕ್ಕಾಗುತ್ತದೆಯೇ?

ಡಾ॥ ಹೆಚ್.ಸಿ.ಮಹದೇವಪ್ಪ: ನಮ್ಮ ದೇಶದ ಆರ್ಥಿಕ ಮತ್ತು ಸಾಮಾಜಿಕ ಬದುಕನ್ನು ಒಮ್ಮೆ ನೋಡಿದಾಗ, ರೋಗರುಜಿನಗಳಿಂದ ಸಂಪೂರ್ಣವಾಗಿ ಹೊರತಾದ ರಾಷ್ಟ್ರ ನಿರ್ಮಾಣ ಸಾಧ್ಯವಿಲ್ಲ.

ಅಧ್ಯಕ್ಷರು: ಸೊಳ್ಳೆಗಳು, ಆರ್ಥಿಕ, ಸಾಮಾಜಿಕ ಕ್ಷೇತ್ರ ಬಿಟ್ಟು ರಾಜಕೀಯ ಕ್ಷೇತ್ರಕ್ಕೇನಾದರೂ ಬಂದಿವೆಯೇ?

ಡಾ॥ ಹೆಚ್.ಸಿ.ಮಹದೇವಪ್ಪ: ಬಂದಿರಬಹುದು.

ಶ್ರೀ ವಾಟಾಳ್ ನಾಗರಾಜ್: ಈ ಸರ್ಕಾರಕ್ಕೆ ಸೊಳ್ಳೆಯನ್ನೇ ನಿಯಂತ್ರಣ ಮಾಡಲಿಕ್ಕಾಗಲಿಲ್ಲವೆಂದರೆ, ಇನ್ನು ಒಳ್ಳೆಯ ಆಡಳಿತವನ್ನೇನು ಕೊಡುವುದಕ್ಕಾಗುತ್ತದೆ? ಶಾಸನ ಸಭೆಗೆ ನೊಣಗಳು ಬಂದವು. ನಮ್ಮ ಶಿವಪ್ಪನವರು ಹೋದ ಶಾಸನ ಸಭೆಯಲ್ಲಿ 12 ನೊಣಗಳನ್ನು ಹೊಡೆದು ಹಾಕಿದರು. ಇದನ್ನು ಶಾಸಕರಾಗಿ ಹೇಳಿಕೊಳ್ಳಬಾರದು, ನಮಗೆ ನಿಜವಾಗಿ ನೋವಾಗುತ್ತದೆ.

ಅಧ್ಯಕ್ಷರು: ಮಾನ್ಯ ಶಿವಪ್ಪನವರು ಸಭೆಗೆ ಬರುವಾಗ ಮಿಠಾಯಿ ಇಟ್ಟುಕೊಂಡು ಬಂದರೆ ನೊಣ ಬರದೆ, ಬೇರೇನು ಬರುತ್ತದೆ?

ಶ್ರೀ ವಾಟಾಳ್ ನಾಗರಾಜ್: ಅವರು ಸಕ್ಕರೆ ತಿನ್ನುವುದಿಲ್ಲ.

ಶ್ರೀಮತಿ ಬಿ.ಟಿ.ಲಲಿತಾನಾಯಕ್: ಸಕ್ಕರೆ ತಿನ್ನದಿದ್ದರೆ ಅಲ್ಲಿ ಗಲೀಜಿರಬೇಕು, ಇಲ್ಲ ಸಿಹಿ ಇರಬೇಕು. ಅವೆರಡೂ ಇಲ್ಲದಿದ್ದರೆ ಸೊಳ್ಳೆ ಬರುವುದಕ್ಕೆ ಸಾಧ್ಯವಿಲ್ಲ. ಎರಡರಲ್ಲಿ ಯಾವುದೋ ಒಂದಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ತಾವು ಡಿಡಿಟಿ ಸಿಂಪಡಿಸುತ್ತಿದ್ದೀರಿ, ಅದರಿಂದ ಸೊಳ್ಳೆಗಳು ಸಾಯುತ್ತಿಲ್ಲ. ಅದರ ಬಗ್ಗೆ ವಿಶೇಷವಾಗಿ ಬೇರೇನಾದರೂ ವಿಧಾನವನ್ನು ಆಲೋಚನೆ ಮಾಡಿದರೆ ನಾಶ ಮಾಡಬಹುದೇ ಹೊರತು ಡಿ.ಡಿ.ಟಿಯಿಂದ ಸಾಧ್ಯವಿಲ್ಲ.

ಡಾ॥ ಹೆಚ್.ಸಿ.ಮಹದೇವಪ್ಪ: ಡಿಡಿಟಿಗೆ ಪರ್ಯಾಯವಾಗಿ ಸಿಂಥೆಟಿಕ್ ಪೈರಥ್ರೈಡ್ ಎನ್ನುವ ಔಷಧಿ ಕಂಡುಹಿಡಿದಿದ್ದಾರೆ. ಅದನ್ನು ನಿರ್ದಿಷ್ಟವಾದ ಏರಿಯಾಗಳಿಗೆ ಮಾತ್ರ ಸಿಂಪಡಿಸಬೇಕಾಗುತ್ತದೆ. ಒಮ್ಮೆ ಸಿಂಥೆಟಿಕ್ ಪೈರಥ್ರೈಡ್ ಇಡೀ ರಾಜ್ಯದಲ್ಲಿ ಹೊಡೆದರೆ, ಮತ್ತೆ ರೆಸಿಸ್ಟೆಂಟ್ ಡೆವಲಪ್‌ಮೆಂಟ್ ಮಾಡಿದರೆ there is no alternative to control mosquitos. 1980ರಿಂದ ಮಲೇರಿಯಾ ನಮ್ಮ ದೇಶಕ್ಕೆ ಅತಿ ದೊಡ್ಡ ಪ್ರಮಾಣದಲ್ಲಿ ಮರು ಪ್ರವೇಶ ಮಾಡಿದೆ. ರಾಜ್ಯ ಸರ್ಕಾರ ತನ್ನೆಲ್ಲಾ ಪ್ರಯತ್ನವನ್ನೂ ಮಾಡಿ ಸುಮಾರು 167 ಪ್ರಾಬ್ಲಮ್ಯಾಟಿಕ್ ಪಿಎಚ್‌ಸಿಗಳನ್ನು ಐಡೆಂಟಿಫೈ ಮಾಡಿ, ಅವರಿಗೆ ಬೇಕಾದ ಸವಲತ್ತುಗಳನ್ನು, ಔಷಧೋಪಕರಣಗಳನ್ನು ಕೊಟ್ಟು ಮಲೇರಿಯಾವನ್ನು ನಿಯಂತ್ರಣ ಮಾಡಲು ಎಲ್ಲ ವಿಧವಾದ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ನಗರ ಪ್ರದೇಶಗಳಲ್ಲಿ ಅವು ನಮ್ಮ ಇಲಾಖಾ ವ್ಯಾಪ್ತಿಗೆ ಬಾರದಿದ್ದರೂ ಕೂಡ ನಾವು ಅದಕ್ಕೆ ಪ್ರವೇಶ ಮಾಡಿ ಒಂದು ಬೈ-ಲಾ ತಯಾರು ಮಾಡಿ ಅರ್ಬನ್ ಡೆವಲಪ್‌ಮೆಂಟ್‌ನವರೂ ಅದರಲ್ಲಿ ಭಾಗಿಯಾಗುವ ಹಾಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕುಂಬ್ಳೆ ಸುಂದರ್‌ರಾವ್: ಮಲೇರಿಯಾ ಪರಿಸ್ಥಿತಿ ಹೇಗಿದೆಯೆಂದರೆ, ಮಂಗಳೂರಿನಲ್ಲಿ ಯಾರಿಗೆ ಜ್ವರ ಬಂದರೂ ಸಹ ರೋಗ ಪರೀಕ್ಷೆ ಮಾಡದೆ ವೈದ್ಯರು ಔಷಧಿ ಕೊಡಲ್ಲ. ನಮ್ಮ ಮನೆಯಲ್ಲಿ ಒಬ್ಬೊಬ್ಬರಿಗೆ ಮೂರುಮೂರು ಸಲ ಮಲೇರಿಯಾ ಬಂತು. ಈ ರೀತಿಯ ಪರಿಸ್ಥಿತಿಯಲ್ಲಿ ಖಾಸಗಿ ವೈದ್ಯರು ಒಂದು ಸಂಘಟನೆ ಮಾಡಿಕೊಂಡು ಮಲೇರಿಯಾ ನಿಯಂತ್ರಣಕ್ಕಾಗಿ ಏನು ಮಾಡಬೇಕೆಂಬುದರ ಬಗ್ಗೆ ತಿಳುವಳಿಕೆ ಕೊಡುತ್ತಿದ್ದಾರೆ, ಸೇವೆ ಮಾಡುತ್ತಿದ್ದಾರೆ. ಆದರೆ, ಸರ್ಕಾರದ ಕಡೆಯಿಂದ ಇದಕ್ಕೆ ಯಾವುದೇ ಪ್ರತಿಕ್ರಿಯೆ ಬರುತ್ತಿಲ್ಲ. ಇಷ್ಟೊಂದು ಮಲೇರಿಯಾಪೀಡಿತ ಪ್ರದೇಶ ಏನಿದೆ ಅದಕ್ಕೆ ಒಂದು ವಿಶೇಷ ಘಟಕವನ್ನು ಕೊಡಲು ಸರ್ಕಾರ ಮೀನಾಮೇಷದಿಂದ ನೋಡುತ್ತಿದೆ ಎಂದರೆ ಜನರ ಬಗ್ಗೆ ಕಾಳಜಿಯಿಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಡಿ.ವಿ.ಸದಾನಂದ ಗೌಡ: ಗ್ರಾಮಾಂತರ ಮಟ್ಟದಲ್ಲಿ ಡಿಡಿಟಿ ಸಿಂಪರಣೆ ಪಂಚಾಯತ್‌ವತಿಯಿಂದ ಮಾಡಲಾಗುತ್ತಿದೆ. ಈಗ ಏನಾಗಿದೆಯೆಂದರೆ, ಅವರಿಗೆ

ಪೇಮೆಂಟ್ ಮಾಡಲಿಕ್ಕೆ ದುಡ್ಡಿಲ್ಲ. ಇಲಾಖೆಯವರು ಅದಕ್ಕೆ ಬೇಕಾದ ಹಣವನ್ನು ಕೊಡುವ ವ್ಯವಸ್ಥೆ ಮಾಡುತ್ತಿಲ್ಲ. ಇದರಿಂದಾಗಿ, ಗ್ರಾಮಾಂತರ ಪ್ರದೇಶಗಳಲ್ಲಿ ಡಿಡಿಟಿ ಸಿಂಪರಣೆ ಕಾರ್ಯ ಎಲ್ಲೆಡೆ ಸರಿಯಾಗಿ ನಡೆಯುತ್ತಿಲ್ಲ. ಅದಕ್ಕೆ ಇಲಾಖೆ ವತಿಯಿಂದಲೇ ಪ್ರತ್ಯೇಕ ವ್ಯವಸ್ಥೆ ಮಾಡಬೇಕು.

ಡಾ॥ ಹೆಚ್.ಸಿ.ಮಹದೇವಪ್ಪ: ಮಂಗಳೂರಿನಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳು ಬರುತ್ತಿವೆ. ಮತ್ತು ಅಲ್ಲಿ ಹಾರ್ಬರ್ ಇದೆ. ಹಾಗಾಗಿ ಜನರು ಉದ್ಯೋಗಕ್ಕಾಗಿ ಅಲ್ಲಿಗೆ ವಲಸೆ ಬರುತ್ತಿದ್ದಾರೆ. ಅಲ್ಲಿ ಬರತಕ್ಕ ಜನರ ಬ್ಲಡ್ ಸ್ಮಿಯರ್ ತೆಗೆದುಕೊಂಡು ಕಡ್ಡಾಯವಾಗಿ ಅವರಿಗೆ ಮಲೇರಿಯಾ ಟ್ಯಾಬ್ಲೆಟ್ ಕೊಡಲೇ ಬೇಕಾಗುತ್ತದೆ. ಆ ಕಾರಣಕ್ಕಾಗಿ ಇಂಥ ಕೆಲಸವನ್ನು ಮಾಡುತ್ತಿದ್ದೇವೆ. ಸುಮಾರು 34ಸಾವಿರ ಬ್ಲಡ್ smear ಕಲೆಕ್ಟ್ ಮಾಡಿ 9 ಸಾವಿರಕ್ಕೂ ಹೆಚ್ಚು ಜನರಿಗೆ ಟ್ರೀಟ್‌ಮೆಂಟ್ ಕೊಟ್ಟಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ: ಇಲಾಖೆ ಡಿಡಿಟಿ ಸಿಂಪರಣೆ ಮಾಡುತ್ತಿದ್ದು, ಅದರಿಂದ ನೂರಕ್ಕೆ ನೂರರಷ್ಟು ವರ್ಕ್ ಆಗುತ್ತಿಲ್ಲ. ಐಕಾನ್ ಎನ್ನತಕ್ಕ ಪೌಡರ್‌ನ್ನು ಸುಮಾರು 8 ವರ್ಷಗಳ ಹಿಂದೆ ಮೊದಲ ಬಾರಿಗೆ ನನ್ನ ಕ್ಷೇತ್ರದಲ್ಲಿ ಸಿಂಪರಣೆ ಮಾಡಲಾಗಿದ್ದು, ಅಲ್ಲಿ ಬ್ಲಡ್ ಸ್ಮಿಯರ್ ನೆಗಟೀವ್ ಬರುತ್ತಿತ್ತು. ನೂರಕ್ಕೆ ನೂರರಷ್ಟು ಸಾಲ್ವ್ ಆಗಿತ್ತು. ಅದನ್ನು ರೀಪ್ಲೇಸ್ ಮಾಡಿ ಬೇರೆ ಪೌಡರ್ ತರಿಸುತ್ತಿದ್ದೀರಿ. ಅದು ಏನೂ ಕೆಲಸ ಮಾಡುವುದಿಲ್ಲ. ಇಡೀ ನಮ್ಮ ಜಿಲ್ಲೆಯಲ್ಲಿ ವ್ಯಾಪಕವಾದ ಕಾರ್ಯಕ್ರಮ ನಡೆದಿದ್ದು, ಇದರಿಂದ ಪ್ರಗತಿ ಆಗುತ್ತಿಲ್ಲ. ಈ ಮೆಡಿಸನ್ ಬಿಟ್ಟು ಐಕಾನ್‌ಗೆ ಶಿಫ್ಟ್ ಮಾಡಿದರೆ ಸಹಾಯವಾಗುತ್ತದೆಂದು ನಾನು ಸಲಹೆ ಮಾಡುತ್ತೇನೆ.

ಡಾ॥ ಹೆಚ್.ಸಿ.ಮಹದೇವಪ್ಪ: ಇಂತಹ ಔಷಧಿಯನ್ನು ತೆಗೆದುಕೊಳ್ಳಬೇಕೆಂದು ನಾವು ಸಲಹೆ ಮಾಡುವುದಕ್ಕಾಗುವುದಿಲ್ಲ. ಇದು ರಾಷ್ಟ್ರೀಯ ಮಲೇರಿಯಾ ನಿಯಂತ್ರಣದ ಕೆಳಗಿರುವ ಟೆಕ್ನಿಕಲ್ ಕಮಿಟಿಯವರು ಸಲಹೆ ಮಾಡುವಂತಹ ಔಷಧವನ್ನು ಕೊಡಬೇಕು. ಈಗಾಗಲೇ ಸಿಂಥೆಟಿಕ್ ಪೈರಥ್ರೈಡ್‌ನ್ನು ಡಿಡಿಟಿಗೆ ಪರ್ಯಾಯವಾಗಿ ಅವರು ಸಲಹೆ ಮಾಡಿರುವುದರಿಂದ ಇದು ಪರಿಣಾಮಕಾರಿಯಾಗಿ ಸೊಳ್ಳೆ ನಿಯಂತ್ರಣದಲ್ಲಿ ತೊಡಗಿರುವುದರಿಂದ ಉಪಯೋಗಿಸಲಾಗುತ್ತಿದೆ.

ಅಧ್ಯಕ್ಷರು: ಈ ಟೈಂನಲ್ಲಿ ಈ ತರಹದ ರಿಸಲ್ಟ್ ಬಂದ ಮೇಲೆ, ನೀವು ಆ ಕುರಿತು ಪ್ರಯತ್ನಿಸಿ. The Hon'ble Member is giving suggestion.

ಡಾ॥ ಹೆಚ್.ಸಿ.ಮಹದೇವಪ್ಪ: ಅಧ್ಯಕ್ಷರೇ, The recommendation should come from the Union Government.

ಅಧ್ಯಕ್ಷರು: ನೀವು ಇಲ್ಲಿಂದ ಕಳುಹಿಸಿ.

ಡಾ॥ ಹೆಚ್.ಸಿ.ಮಹದೇವಪ್ಪ: ಕಳುಹಿಸಿಕೊಡುತ್ತೇನೆ.

ಅರೆಕಾಲಿಕ ಶಿಕ್ಷಕರನ್ನು ಖಾಯಂಗೊಳಿಸುವುದು

18 (153)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪದವಿ ಪೂರ್ವ:ಪದವಿ ಕಾಲೇಜುಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಇವರುಗಳನ್ನು ಖಾಯಂಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಶಿಕ್ಷಣ ಸಚಿವರು):

ಅ) 1) ರಾಜ್ಯದ ಪದವಿ ಕಾಲೇಜುಗಳಲ್ಲಿ 1997-98ನೇ ಸಾಲಿನಲ್ಲಿ ಅರೆಕಾಲಿಕ ಉಪನ್ಯಾಸಕರು ಕರ್ತವ್ಯ ನಿರ್ವಹಿಸರುವುದಿಲ್ಲ.

2) ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ: 19. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಆ) ಸರ್ಕಾರ ಪದವಿ ಕಾಲೇಜುಗಳಲ್ಲಿರುವ ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸಲು ಸರ್ಕಾರಿ ಆದಿಸೂಚನೆ ಸಂಖ್ಯೆ:ಡಿಪಿಎಆರ್ 48 ಎಸ್ಆರ್ಇ 96 ದಿನಾಂಕ: 22-1-97ರಲ್ಲಿ ರಚಿಸಿದ್ದ ವಿಶೇಷ ನಿಯಮಾವಳಿಗಳನ್ನು ದಿನಾಂಕ: 15-12-97ರಂದು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅನೂರ್ಜಿತಗೊಳಿಸಿರುವುದರಿಂದ ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸಲು ಬರುವುದಿಲ್ಲ.